**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿ:03-08-2026**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಟಿ ಹೆಚ್ ಕೆ ವಕೀಲರಿಂದಃ**

ನಾನು ಡಿಪ್ಲೋಮೋ ಇನ್ ಕಂಪ್ಯೂಟರ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಚೆಕ್ ವ್ಯವಹಾರದ ಬಗ್ಗೆ ಅರಿವು ಇರುತ್ತದೆ. ನಾನು ಕೃಷಿಕನಾಗಿರುತ್ತೇನೆ. ನಾನು ಕಾಫಿ ಮತ್ತು ಕಾಳು ಮೆಣಸು ಬೆಳೆಯುತ್ತೇನೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. 2018 ರಲ್ಲಿ ದಿನೇಶ ಮತ್ತು ನನ್ನ ನಡುವೆಯಾದ ಕಾಳು ಮೆಣಸು ವ್ಯಾಪಾರದ ಬಗ್ಗೆ ಕರಾರು ಪತ್ರವಾಗಿರುತ್ತದೆ. ಸದರಿ ಕರಾರು ಪತ್ರದಂತೆ ನಾನು ಕಾಳು ಮೆಣಸು ಮಾರಾಟ ಮಾಡಲು ದಿನೇಶ್ ರವರಿಂದ 5 ಲಕ್ಷ ಹಣವನ್ನು ನಗದು ಮೂಲಕ ಪಡೆದಿರುತ್ತೇನೆ. ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ದಿನೇಶ್ ರವರಿಂದ 5 ಲಕ್ಷ ಹಣ ಪಡೆದಿರುವ ಬಗ್ಗೆ ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಿರುವುದಿಲ್ಲ. ದಿನೇಶ್ ರವರು ಸದರಿ 5 ಲಕ್ಷ ಹಣ ವಾಪಸ್ಸು ನೀಡುವಂತೆ 2019ರಲ್ಲಿ ಕೇಳಿದ್ದರು. ಸದರಿ 1 ವರ್ಷದ ಅವಧಿಯಲ್ಲಿ ಯಾವುದೇ ದಾಖಲಾತಿ ಅಥವಾ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ.

ದಿನೇಶ್ ರವರು ನನಗೆ 5 ಲಕ್ಷ ನೀಡಿದ ಬಾಬ್ತು ಭದ್ರತೆಗಾಗಿ ಅವರಿಗೆ 2 ಸಹಿ ಮಾಡಿದ ಖಾಲಿ ಚೆಕ್ ಗಳನ್ನು ನೀಡಿರುತ್ತೇನೆ. ಸದರಿ ಚೆಕ್ ಗಳ ಬಗ್ಗೆ ನಾನು ಬ್ಯಾಂಕ್ ನಲ್ಲಿ ತಿಳಿದುಕೊಂಡಿರುತ್ತೇನೆ. 2019 ರಲ್ಲಿ ದಿನೇಶ್ ರವರು ಚೆಕ್ ನ್ನು ನಗದೀಕರಣಕ್ಕಾಗಿ ಹಾಕಿರುವುದಿಲ್ಲ. ನಾನು ದಿನೇಶ್ ರವರಿಗೆ 2 ಚೆಕ್ ನೀಡಿರುವ ಬಗ್ಗೆ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ದಿನೇಶ್ ರವರಿಂದ ಸ್ವೀಕೃತಿ ಸಹ ಪಡೆದುಕೊಂಡಿರುವುದಿಲ್ಲ. ನನ್ನ ಮತ್ತು ದಿನೇಶ್ ರವರ ಜೊತೆಗಿನ ವ್ಯವಹಾರಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದೂರುದಾರರು ಮತ್ತು ದಿನೇಶ್ ರವರು ಸ್ನೇಹಿತರಿರುವುದರಿಂದ ಅವರ ಮೂಲಕ ಈ ಕೇಸನ್ನು ಹಾಕಿಸಿರುತ್ತಾರೆಂದು ನುಡಿಯುತ್ತಾರೆ. ದಿನೇಶ್ ರವರು ದೂರುದಾರರ ಮೂಲಕ ಈ ಕೇಸನ್ನು ಹಾಕಿಸಿರುವ ಬಗ್ಗೆ ನನ್ನ ಬಳಿ ಯಾವುದೇ ಸಾಕ್ಷಿ ಪುರಾವೆ ಇರುವುದಿಲ್ಲ. ನನಗೂ ಮತ್ತು ದೂರುದಾರರಿಗೆ ಈ ಹಿಂದೆ ಹಣಕಾಸಿನ ವ್ಯವಹಾರ ಇದ್ದು, ಅದರ ಬಾಬ್ತು ನಾನು ನನ್ನ ಹೆಂಡತಿಯ ಖಾತೆಯಿಂದ ದೂರುದಾರರಿಗೆ 3 ಲಕ್ಷ ಹಣ ಕಳುಹಿಸಿದ್ದು, ಈ ಕೇಸನ ವ್ಯವಹಾರಕ್ಕೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕಣದ ವ್ಯವಹಾರಕ್ಕೂ ದಿನೇಶ್‌ಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ

ಯಲ್ಲ. ದಿನೇಶ್‌ರವರಿಗೆ 2 ಚೆಕ್‌ಗಳನ್ನು ನೀಡಿರುತ್ತೇನೆಂದು ತಿಳಿಸಿದ್ದು, ಸದರಿ ಚೆಕ್ ಗಳನ್ನು ವಾಪಸ್ಸು ಪಡೆಯಲು ಈವರೆಗೂ ದಿನೇಶ್‌ರವರಿಗೆ ನೋಟೀಸ್ ಆಗಲೀ ಅಥವಾ ಕಾನೂನು ಕ್ರಮ ಜರುಗಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಚೆಕ್ ಗಳ ಬಗ್ಗೆ ಬ್ಯಾಂಕ್ ನಲ್ಲಿ ನಾನು stop payment ಮಾಡಿಸಿಲ್ಲ.

ಈ ಪ್ರಕರಣದ ಚೆಕ್ ಅಲ್ಲದೇ ಮತ್ತೊಂದು ಚೆಕ್ ನ ಬಗ್ಗೆ ಸಹ ನಾನು ಮಾಹಿತಿ ಕಲೆ ಹಾಕಿರುವುದಿಲ್ಲ. ನನಗೆ ದೂರುದಾರರು 2019 ರಿಂದ ಪರಿಚಯವಿರುತ್ತಾರೆ. ನಿ ಪಿ 1 ಚೆಕ್ ನಲ್ಲಿರುವ ಬರವಣಿಗೆ ನನ್ನದೇ ಆಗಿರುತ್ತದೆ. ದೂರುದಾರರು ಕಳುಹಿಸಿದ ನೋಟೀಸ್ ಗೆ ಮರುತ್ತರ ನೀಡಲು ತೊಂದರೆ ಇರಲಿಲ್ಲ. ಆದರೆ ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ. ನಾನು ಮತ್ತು ದೂರುದಾರರು ಪರಿಚಯ ಇರುವುದರಿಂದ ನಾನು ಆಗಸ್ಟ 2022 ರಲ್ಲಿ ದೂರುದಾರರನ್ನು 10 ಲಕ್ಷ ಸಾಲ ಕೇಳಿರುತ್ತೇನೆಂದರೆ ಸರಿಯಲ್ಲ. ಸಾಲವನ್ನು ಪಡೆದು 5 ತಿಂಗಳ ಕಾಲಾವಕಾಶ ಕೇಳಿರುತ್ತೇನೆಂದರೆ ಸರಿಯಲ್ಲ. ಆನಂತರ ದೂರುದಾರರು ಹಣ ಕೇಳಿದಾಗ ನಾನು ಹಣದ ತೀರುವಳಿಗಾಗಿ ನಿ ಪಿ 1 ಚೆಕ್ ನೀಡಿರುತ್ತೇನೆಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕ್ ನಲ್ಲಿ ಹಿಂಬರಹ ನೀಡಿದ ನಂತರ ದೂರುದಾರರು ದಿಃ 16.02.2023 ರಂದು ನನಗೆ ನೋಟೀಸ್ ನೀಡಿದ್ದು, ನಾನು ಸೂಕ್ತ ಮರುತ್ತರ ನೀಡಿಲ್ಲ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ 10 ಲಕ್ಷ ನೀಡಲು ಬದ್ಧನಾಗಿರುತ್ತೇನೆಂದರೆ ಸರಿಯಲ್ಲ. ದೂರುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ ಡಿ 1 ಅಕೌಂಟ್ ಸ್ಟೇಟ್ ಮೆಂಟ್ ಪಿರ್ಯಾದಿ ಮತ್ತು ನನ್ನ ಬೇರೆ ವ್ಯವಹಾರದ ಹಣ ಆಗಿರುತ್ತದೆ ಹೊರತು ಈ ಪ್ರಕರಣದ ವ್ಯವಹಾರ ಅಲ್ಲ ಎಂದರೆ ಸರಿಯಲ್ಲ. ನಿ ಡಿ 1 ದಾಖಲಾತಿಗೂ ಈ ಪ್ರಕಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**